<u>**ದಿನಾಂಕಃ 20-02-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.**</u>

ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಸದರಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಇರುವ ಎಲ್ಲಾ ವಿಷಯಗಳು ಸತ್ಯವಾಗಿವೆ.

2 ನೇ ಎದುರುದಾರರ ವಿರುದ್ದ ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸುತ್ತೇನೆ .

<u>**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎಂ ಎಸ್ ಎ ವಕೀಲರಿಂದಃ**</u>

1. ಅಪಘಾತ ಸಮಯದಲ್ಲಿ ನಮ್ಮ ವಿಮೆಗೆ ಒಳಪಟ್ಟ ಕಾರ್ ಸಂಖ್ಯೆ ಕೆ ಎ 20 ಎಂ ಎ 2643 ನೇದ್ದಕ್ಕೆ ವಿಮೆ ಪಾಲಸಿ, ಡಿ ಎಲ್ ಚಾಲ್ತಿಯಲ್ಲಿತ್ತು ಎಂದರೆ ಸಾಕ್ಷಿ ವಿಮಾ ಪಾಲಸಿ ಚಾಲ್ತಿಯಲ್ಲಿತ್ತು ಆದರೆ ಚಾಲಕನಿಗೆ ಡ್ರೈವಿಂಗ್ ಲೈಸನ್ಸ ಇರಲಿಲ್ಲ ಎಂದು ಹೇಳುತ್ತಾರೆ. ನಾವು ನೀಡಿದ ನೋಟಿಸಿಗೆ ಚಾಲಕ ಅಥವಾ ವಾಹನದ ಮಾಲಿಕರು ಯಾವುದೆ ಉತ್ತರ ಕೊಟ್ಟಿರುವುದಿಲ್ಲ. ನಮ್ಮ ಕಂಪನಿಯವರು ಯಾವುದೆ ಇನ್ವೆಸ್ಟಿಗೇಟರನ್ನು ನೇಮಕ ಮಾಡಿರುವುದಿಲ್ಲ. ಭಾವಚಿತ್ರಗಳನ್ನು ಸಹ ತೆಗೆದಿರುವುದಿಲ್ಲ. ಇದೆ ರೀತಿಯ ಕೇಸ್ ಗಳಲ್ಲಿ ನಾವು ರಾಜಿ ಮಾಡಿಕೊಂಡು ಪರಿಹಾರ ಹಣ ಪಾವತಿಸಿರುತ್ತೇವೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ಕೊಡಬೇಕಾಗುತ್ತದೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಮರು ವಿಚಾರಣೆಃ ಏನೂ ಇಲ್ಲ.**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/-

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.